ಪಿ. ಡಬ್ಲ್ಯೂ:1

**<u>ಸಾಕ್ಷಿಗೆ ದಿನಾಂಕ 25.02.2026 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲು: 8 ನೇ ಪ್ರತಿವಾದಿ ಪರ ವಕೀಲರಿಂದ:</u>**

ನದಾವಾ ಸ್ವತ್ತುಗಳಲ್ಲಿ ಭಾಗ ಬೇಕು ಎಂದು ದಾವಾ ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತು. ದಾವಾ ಐಟಂ ನಂಬರ-5 ನನ್ನ ತಂದೆಯ ಆಸ್ತಿ ಅಲ್ಲ ಎಂದರೆ ಸರಿ ನಮ್ಮ ಪಿತ್ರಾರ್ಜಿತ ಸ್ವತ್ತು. ದಾವಾ ಐಟಂ ನಂಬರ-5 ರ ಖಾತೆ ನನ್ನ ತಾತನ ಹೆಸರಿನಲ್ಲಿದೆ. ನನ್ನ ತಾತನ ಹೆಸರಿನಲ್ಲಿ ಇದ್ದ ಬಗ್ಗೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ. ಪ್ರಸ್ತುತ ದಾವಾ ಐಟಂ ನಂಬರ-5 ನನ್ನ ತಾತನ ಹೆಸರಿನಲ್ಲಿಲ್ಲ. ದಾವಾ ಐಟಂ ನಂಬರ-5 ನನ್ನ ತಾತನಿಂದ 4 ನೇ ಪ್ರತಿವಾದಿಗೆ ಖಾತೆ ಆಗಿರುತ್ತದೆ. ದಾವಾ ಐಟಂ ನಂಬರ-5 ನ್ನು 4 ನೇ ಪ್ರತಿವಾದಿಗೆ ಅರಿಶಿಣ ಕುಂಕುಮಕ್ಕೆ ಕೊಟ್ಟಿರುತ್ತಾರೆ. ಸದರಿ ಸ್ವತ್ತು ನನ್ನ ಅಜ್ಜಿ ತಾತನ ಸ್ವಂತ ಆಸ್ತಿ ಎಂದರೆ ಸರಿ. 4 ನೇ ಪ್ರತಿವಾದಿ ದಾವಾ ಐಟಂ ನಂಬರ-5 ನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರ ಹಾಜರುಪಡಿಸಿರುತ್ತೇನೆ. ಕೇವಲ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. 8 ನೇ ಪ್ರತಿವಾದಿ ಸ್ವತ್ತನ್ನು ಸವಿತಾ ಎಚ್.ಕೆ ಹಾಗೂ ಅವರ ಗಂಡ ಹಾಗೂ ಮೈನರ್ ಮಕ್ಕಳಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಸವಿತಾ ಎಚ್.ಕೆ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ.

ದಾವಾ ಐಟಂ ನಂಬರ-5 ರ ಖಾತೆ 8 ನೇ ಪ್ರತಿವಾದಿಯ ಹೆಸರಿನಲ್ಲಿದೆ, 8 ನೇ ಪ್ರತಿವಾದಿ ಐಟಂ ನಂಬರ-5 ರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಐಟಂ ನಂಬರ-5 ರಲ್ಲಿ ನನಗಾಗಲಿ, ನನ್ನ ತಂದೆಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ-5 ರಲ್ಲಿ ನನಗೆ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. 1985 ರಲ್ಲಿ ನನ್ನ ತಾತ ನನ್ನ ತಂದೆಗೆ ಆಸ್ತಿಗಳನ್ನು ಹಂಚಿಕೆ ಮಾಡಿದ್ದರು ಎಂದರೆ ಸರಿ. 12 ವರ್ಷದ ನಂತರ ದಾವೆ ಸಲ್ಲಿಸಿದ್ದರಿಂದ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. 8 ನೇ

ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ನನ್ನ ತಂದೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**